ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತೊಂದನೆಯ ಅಧಿವೇಶನ
ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

KREDLನ ಸಿ ಅಂಡ್ ಆರ್ ಬಗ್ಗೆ

ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

59 (504) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ (KREDL) ಸಂಸ್ಥೆಯಲ್ಲಿನ ಸಿ & ಆರ್ ಪ್ರಾವಿಧಾನ 3.8 ಏನಿದೆ; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಪ್ರಾವಿಧಾನವನ್ನು ಯಾವ ದಿನಾಂಕದಂದು ಸ್ಥಗಿತಗೊಳಿಸಲು ನಿರ್ಧರಿಸಿ ಸರ್ಕಾರಕ್ಕೆ ಪತ್ರ ಬರೆಯಲಾಯಿತು; ಸರ್ಕಾರವು ಯಾವ ದಿನಾಂಕದಂದು ಈ ಪ್ರಾವಿಧಾನವನ್ನು ಸ್ಥಗಿತಗೊಳಿಸಿ ಆದೇಶ ಹೊರಡಿಸಲಾಯಿತು; (ಆದೇಶದ ಪ್ರತಿಯನ್ನು ನೀಡುವುದು)

(ಇ) ಸಂಸ್ಥೆಯಲ್ಲಿ ಜನವರಿ 2007 ರಿಂದ ಇಲ್ಲಿಯವರೆಗೆ ಎಷ್ಟು ಜನರನ್ನು ಗುತ್ತಿಗೆಯಡಿ ನೇಮಕಾತಿ ಮಾಡಿಕೊಳ್ಳಲಾಗಿದೆ; ಯಾವ ಯಾವ ದಿನಾಂಕಗಳ ಬೋರ್ಡ್ ಮೀಟಿಂಗ್‌ನಲ್ಲಿ ನಿರ್ಣಯಿಸಿ ಎಷ್ಟು ಜನರನ್ನು ಖಾಯಂಗೊಳಿಸಲಾಗಿದೆ; (ಬೋರ್ಡ್ ಮೀಟಿಂಗ್‌ನ ನಡವಳಿಗಳ ಪ್ರತಿಯೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಈ) 2007 ರಿಂದ ಇಲ್ಲಿಯವರೆಗೆ ಖಾಯಂ ಮಾಡಿರುವ ನೌಕರರಿಗೆ ಉಮಾದೇವಿ ಪ್ರಕರಣದ ಪರಿನಿಯಮವು ಅನ್ವಯಿಸುವುದಿಲ್ಲವೇ; ಇವರಿಗೆ ಸರ್ವೋಚ್ಛ ನ್ಯಾಯಾಲಯವು ರಿಯಾಯಿತಿ ತೋರಿದೆಯೇ; (ವಿವರವಾದ ಮಾಹಿತಿ ನೀಡುವುದು)

(ಉ) ಹಾಗಾದಲ್ಲಿ ಸಂಸ್ಥೆಯ ಸಿ & ಆರ್ ಪ್ರಾವಿಧಾನ ಇವರನ್ನು ಖಾಯಂ ಮಾಡುವಾಗ ಚಾಲನೆಯಲ್ಲಿದೆಯೇ; ಅಥವಾ ಸ್ಥಗಿತಗೊಂಡಿದೆಯೇ; (ವಿವರವಾದ ಆದೇಶಗಳೊಂದಿಗೆ ಮಾಹಿತಿ ನೀಡುವುದು)

(ಊ) ಡಿ ಗ್ರೂಪ್ ಹುದ್ದೆಯನ್ನು ಏಜೆನ್ಸಿ ಮುಖಾಂತರ ಪಡೆಯಬೇಕೆಂದು ನಂಜುಂಡಪ್ಪ ವರದಿ ಹಾಗೂ ಇತರ ವರದಿಗಳು ಹೇಳಿದರೂ ಕೂಡ ಕೇವಲ 240 ದಿವಸ ಕೆಲಸ ಮಾಡಿದವರನ್ನು ಖಾಯಂ ಮಾಡಲು ಯಾವ ನಿಯಮಗಳಲ್ಲಿ ಅವಕಾಶವಿದೆ?